ಮಾಡಿಕೊಂಡು ಸರ್ಕಾರಕ್ಕೆ ಅರ್ಜಿ ಹಾಕಿದ್ದ. ಸ್ಕೂಲು ಮಂಜೂರು ಮಾಡಿಸಿಕೊಡುವಂತೆ ಜಿಲ್ಲಾ ಮಂತ್ರಿಗಳಿಗೆ ದುಂಬಾಲು ಬಿದ್ದಿದ್ದ.

ಮೊದಲು ನರ್ಸರಿ ಶುರು ಮಾಡು. ಮುಂದೆ ನೋಡೋಣ ಅಂತ ಮಂತ್ರಿಗಳು ಹೇಳಿ ಮಂಜೂರಾತಿ ಕೊಡಿಸಿದ್ದರು. ಮುಂದಿನ ಜೂನ್‌ನಲ್ಲಿ ಇಂಗ್ಲಿಷ್ ನರ್ಸರಿ ಸ್ಕೂಲು ಶುರು ಆಗುತ್ತೆ ಅಂತ ಪ್ರಚಾರವೂ ಆಗಿತ್ತು. ಮೊದಲು ನರ್ಸರಿ, ಆಮೇಲೆ ಪ್ರೈಮರಿ, ಮುಂದೆ ರೆಸಿಡೆನ್ಸಿಯಲ್ ಹೈಸ್ಕೂಲು, ಆಮೇಲೆ ಕಾಲೇಜು ತೆರೆಯುವುದು ರಾಮಣ್ಣ, ಪ್ರೆಸಿಡೆಂಟು ಮತ್ತು ಎಂಎಲ್ಲೆಗಳ ಪ್ಲಾನು. ಸುಧಾಕರ ನೆಪ ಮಾತ್ರ. ಅವನಿಗೆ ಸ್ಕೂಲು ನಡೆಸುವ ಸಾಮರ್ಥ್ಯ ಇಲ್ಲ. ಮಾತಾಡುವಾಗ ಬಿಕ್ಕುತ್ತಿದ್ದ. ಮೊದಲ ವಾಕ್ಯ ಅವನ ಬಾಯಿಂದ ಬರಲು ಕನಿಷ್ಠ ಹತ್ತರಿಂದ ಹದಿನೈದು ಸೆಕೆಂಡು ಬೇಕಾಗುತ್ತಿತ್ತು.

ಸುಧಾಕರನ ಸ್ಕೂಲಿಗೆ ಗೋಮಾಳದ ಜಮೀನು ಮಂಜೂರು ಮಾಡಿಸಿಕೊಳ್ಳಬೇಕು ಅನ್ನೋದು ರಾಮಣ್ಣನ ಪ್ಲಾನು. ಅವನ ಹತ್ರ ಬೇಕಾದಷ್ಟು ದುಡ್ಡು ಇದ್ದರೂ ಇಂಗ್ಲಿಷ್ ಸ್ಕೂಲಿಗೆ ಗೋಮಾಳವನ್ನು ಮಂಜೂರು ಮಾಡಿಸಿಕೊಳ್ಳುವ ಶಕ್ತಿ ಇರಲಿಲ್ಲ. ಅದಕ್ಕಾಗಿ ಅವನು ಪ್ರೆಸಿಡೆಂಟರನ್ನು ಅವಲಂಬಿಸಿದ್ದ.

ಊರಿನ ಇಬ್ಬರು ಗಣ್ಯರ ಮಾತಿಗೆ ಸ್ವಾಮಿಗಳು ಏನೂ ಹೇಳಲಿಲ್ಲ. ಇನ್ನೂ ಸಮಯ ಇದೆ ಯೋಚನೆ ಮಾಡಿ ಅಂತ ಅಪ್ಪಣೆ ಕೊಡಿಸಿದರು. ಅಷ್ಟರಲ್ಲಿ ಶೆಟ್ಟರ ಕುಟುಂಬದವರು ಪಾದಪೂಜೆಗೆ ಅಂತ ಹೂ ಹಣ್ಣುಗಳ ತಟ್ಟೆ, ನೀರಿನ ತಂಬಿಗೆ ಹಿಡಿದು ಬಂದರು. ಹಜಾರದಲ್ಲಿ ಕೂತಿದ್ದವರು ಎದ್ದು ಅಂಗಳಕ್ಕೆ ಬಂದು ನಿಂತರು. ಕೆಲವರು ಮನೆಗಳತ್ತ ಹೋದರೆ, ಇನ್ನು ಕೆಲವರು ಪಾದಪೂಜೆ ನೋಡಲು ಅಲ್ಲೇ ನಿಂತರು.

ಹಜಾರದಲ್ಲಿ ಕೂತವರೆಲ್ಲ ಎದ್ದು ಹೋಗಿದ್ದನ್ನು ನೋಡಿ ಗಲಿಬಿಲಿಗೊಂಡ ಮೊದೀನ್‌ಗೆ ಏನು ಮಾಡಬೇಕು ಅನ್ನೋದು ಗೊತ್ತಾಗಲಿಲ್ಲ. ಅವನಿಗೆ ಸಣ್ಣ ಸ್ವಾಮಿಗಳ ಪರಿಚಯ ಇರಲಿಲ್ಲ. ಅವರು ಮಠದ ಉತ್ತರಾಧಿಕಾರಿಯಾಗಿ ಐದಾರು ವರ್ಷಗಳಾಗಿವೆ. ಕಾರಿನಲ್ಲಿ ಕೂತು ಹೊಸಳ್ಳಿಗೆ ಬರುವಾಗ, ಹೋಗುವಾಗ ನೋಡಿದ್ದನಷ್ಟೇ. ಆಗೆಲ್ಲ ನಿಂತಲ್ಲೇ ಕೈಜೋಡಿಸಿ ನಮಸ್ಕಾರ ಹೇಳುತ್ತಿದ್ದ. ಈಗ ಅವರ ಬಳಿ ಹೋಗಿ ಹೆಸರು ಹೇಳಿಕೊಂಡು, ಯಾಕೆ ಹೇಳಿ ಕಳಿಸಿದಿರಿ ಅಂತ ಹೆಂಗೆ ಕೇಳೋದು ಅನ್ನೋದು ಗೊತ್ತಾಗದೆ ಅವನೂ ಅಂಗಳಕ್ಕೆ ಬಂದು ನಿಂತ.

ಅಷ್ಟರಲ್ಲಿ ಅಂಬಣ್ಣ ಶೆಟ್ಟರೇ ಅವನ ಬಳಿಗೆ ಬಂದರು. ‘ಮೊದೀನಣ್ಣ, ಸ್ವಾಮಿಗಳು ನಿಮ್ಮತ್ರ ಮಾತಾಡಬೇಕಂತೆ! ಈ ಜನ ಹೋಗಲಿ. ಆಮೇಲೆ ಬಿಡಾರದಲ್ಲೇ ಕೂತು ಮಾತಾಡಬಹುದು. ಇಲ್ಲೇ ಇರಿ’ ಅಂತ ಹೇಳಿ ಸ್ವಾಮಿಗಳ ಹತ್ತಿರಕ್ಕೆ ಹೋಗಿ ಕಿವಿಯಲ್ಲಿ ಏನೋ ಹೇಳಿದರು. ಸ್ವಾಮಿಗಳ ದೃಷ್ಟಿ ಮೊದೀನ್ ಮೇಲೆ ಬಿತ್ತು. ಏನು ಮಾಡಬೇಕು ಎನ್ನುವುದು ಗೊತ್ತಾಗದೆ ಮೊದೀನ್ ಎರಡೂ ಕೈಗಳನ್ನು ಎತ್ತಿ ಮುಗಿದ. ಸ್ವಾಮಿಗಳು ಮುಗುಳ್ನಕ್ಕರು.

ಪಾದಪೂಜೆ ಮುಗಿಯುವ ಹೊತ್ತಿಗೆ ಒಂದೂವರೆ ಗಂಟೆ ದಾಟಿತ್ತು. ಜನ ಬರುತ್ತಲೇ ಇದ್ದರು. ಅಂಗಳದಲ್ಲಿ ನಿಂತೇ ಇದ್ದ ಮೊದೀನ್‌ಗೆ ಇನ್ನಷ್ಟು ಹೊತ್ತು ಅಲ್ಲೇ ಇರುವುದೋ ಅಥವಾ ಅಂಗಡಿಗೆ ಹೋಗುವುದೋ ಗೊತ್ತಾಗಲಿಲ್ಲ.

ಅಷ್ಟರಲ್ಲಿ ಮಠದ ಹುಡುಗನೊಬ್ಬ ಬಂದು ‘ಪಾದಪೂಜೆ ಮುಗೀತು. ನೀವು ಬಿಡಾರದೊಳಕ್ಕೆ ಬರಬೇಕಂತೆ’ ಅಂತ ಹೇಳಿ ಜತೆಯಲ್ಲೇ ಕರೆದೊಯ್ದ. ಸ್ವಾಮಿಗಳು ಕೂರುತ್ತಿದ್ದ ಕುರ್ಚಿ ಎದುರು ಜಮಖಾನದ ಮೇಲೆ ಕೂರುವಂತೆ ಹೇಳಿದ. ಹತ್ತು ನಿಮಿಷ ಕಳೆದ ಮೇಲೆ ಸ್ವಾಮಿಗಳು ಬಂದರು. ಮೊದೀನ್ ಎದ್ದು ನಿಂತು ಬಗ್ಗಿ ನಮಸ್ಕರಿಸಲು ಮುಂದಾದ. ‘ಬೇಡಪ್ಪ ಬೇಡ... ನೀವು ಹಜ್ ಯಾತ್ರೆ ಮಾಡಿದ್ದೀರ ಅಂತ ಗೊತ್ತಿದೆ. ನೀವು ನಮ್ಮ ಕಾಲುಗಳನ್ನು ಮುಟ್ಟಬಾರದು. ಹೀಗೆ ಕೈಮುಗಿದರೆ ಸಾಕು...’ ಎನ್ನುತ್ತ ಅವರೇ ಎರಡೂ ಕೈ ಜೋಡಿಸಿ ನಮಸ್ಕರಿಸಿದರು.